ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ. ಕಾರ್ಖಾನೆಯು ರೂ.5.60 ಕೋಟಿಗಳನ್ನು ರೈತರಿಗೆ ಪಾವತಿಸಿರುತ್ತದೆ. ಜುಲೈ 2002ರ ಅಂತ್ಯದೊಳಗೆ ಕಬ್ಬು ನುರಿಸುವಿಕೆಯನ್ನು ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಕಾರ್ಖಾನೆಯು ಕಬ್ಬು ಅಭಿವೃದ್ಧಿ ಅಯುಕ್ತರು ಹಾಗೂ ಸಕ್ಕರೆ ನಿರ್ದೇಶಕರಿಗೆ ವರದಿ ಮಾಡಿರುತ್ತದೆ.

ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ ಇದರ ಸದಸ್ಯತ್ವದ ಪುನರ್ ವರ್ಗೀಕರಣ

206 (1780)- ಶ್ರೀ ಎಸ್.ಎ.ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡಬಾತಿ, ಇದರ ಸದಸ್ಯತ್ವದ ಪುನರ್ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಸಕ್ಕರೆ ನಿರ್ದೇಶಕರು ಹೊರಡಿಸಿರುವ ದಿ: 4-8-88ರ ಮತ್ತು 6-8-88ರ ಆದೇಶಗಳು ಯಥಾವತ್ತಾಗಿ ಜಾರಿ ಆಗದೇ ಇರುವುದು ನಿಜವೇ:

ಆ. ಹೌದಾದಲ್ಲಿ ಕಾರಣಗಳೇನು?

ಇ. ಯಥಾವತ್ತಾಗಿ ಜಾರಿ ಆದಲ್ಲಿ ಸರ್ಕಾರಕ್ಕೆ ಕಾರ್ಖಾನೆಗೆ ಷೇರುದಾರರಿಗೆ ಮತ್ತು ಎನ್.ಆರ್.ಡಿ.ಖಾತೆ ಹೊಂದಿರುವ "ಇ" ತರಗತಿ ಸದಸ್ಯರುಗಳಿಗೆ ಆಗುವ ಸಾಧಕ-ಭಾದಕಗಳೇನು?

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು)

ಅ. ಕಾರ್ಖಾನೆಯು ದಿ:4-8-88 ಮತ್ತು 6-8-88ರ ಸಕ್ಕರೆ ನಿರ್ದೇಶಕರ ಆದೇಶಗಳನ್ನು ಸಹಕಾರ ಸಂಘಗಳ ಕಾಯ್ದೆಗೆ ನಿಯಮಾವಳಿ ಮತ್ತು ಕಾರ್ಖಾನೆ ಬೈಲಾಗಳಿಗನುಗುಣವಾಗಿ ಜಾರಿಗೊಳಿಸಿರುತ್ತದೆ.

ಆ. ಮೇಲಿನ (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. ಸಾಧಕ-ಭಾದಕಗಳನ್ನು ಊಹಿಸಲು ಬರುವುದಿಲ್ಲ.

ರಾಜ್ಯದಲ್ಲಿ ನುಸಿಪೀಡೆ ಔಷಧ ಕುರಿತು

207 (1695)- ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

a. ರಾಜ್ಯದಲ್ಲಿ ಸಿಂಪರಣೆಯಾದ ನುಸಿಪೀಡೆ ಔಷಧದ ಪ್ರಮಾಣವೆಷ್ಟು?ಹಾಗೂ ಅದರ ಮೌಲ್ಯವೆಷ್ಟು?

b. ಪ್ರತಿ ತಾಲ್ಲೂಕುವಾರು ಸಿಂಪರಣೆಯಾದ ಔಷಧದ ಪ್ರಮಾಣವೆಷ್ಟು?

c. ಸಿಂಪರಣೆಯಿಂದ ನಾಶವಾದ ತೆಂಗಿನ ಗಿಡಗಳ ಸಂಖ್ಯೆ ಹಾಗೂ ಗಾಸಿಗೊಳಗಾದ ರೈತರ ಸಂಖ್ಯೆ ಎಷ್ಟು?

d. ಸಂಕಷ್ಟಕ್ಕೊಳಗಾದ ರೈತರಿಗೆ ಸರ್ಕಾರ ನೀಡಿರುವ ಪರಿಹಾರವೆಷ್ಟು?

e. ಅವೈಜ್ಞಾನಿಕ ಸಿಂಪರಣೆಗೆ ಶಿಪಾರಸ್ಸು ಮಾಡಿದ ಅಧಿಕಾರಿಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಶಿಸ್ತು ಕ್ರಮವೇನು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು)

a. 2.31ಲಕ್ಷ ಲೀಟರ್ ಔಷಧಿ ಖರೀದಿಸಲಾಗಿದ್ದು ಇದರ ಮೌಲ್ಯ ರೂ. 960 ಲಕ್ಷಗಳು. ಈ ಪೈಕಿ 1.23ಲಕ್ಷ ಲೀಟರ್ ಔಷಧಿಯಿಂದ ಉಪಚರಿಸಲಾಗಿದೆ.

b. ರಾಜ್ಯದ ಪ್ರಮುಖ ತೆಂಗು ಬೆಳೆಯುವ 12 ಜಿಲ್ಲೆಗಳಲ್ಲಿ ತಾಲ್ಲೂಕುವಾರು ಉಪಚರಿಸಿದ ಔಷಧಿಯ ಪ್ರಮಾಣವನ್ನು ಅನುಬಂಧ-1ರಲ್ಲಿ ಒದಗಿಸಿದೆ.

c. ಔಷದೋಪಚಾರದಿಂದ ತೆಂಗಿನ ಗಿಡಗಳು ನಾಶವಾಗಿರುವುದಿಲ್ಲ. ಆದರೆ ಕೆಲವು ಅಪರೂಪದ ಪ್ರಕರಣಗಳಲ್ಲಿ ಪಾರ್ಶ್ವ ಪರಿಣಾಮಗಳು ಉಂಟಾಗಿರುವುದು ವರದಿಯಾಗಿದೆ.

d. ಉದ್ಭವಿಸುವುದಿಲ್ಲ.

e. ಉದ್ಭವಿಸುವುದಿಲ್ಲ.

ಅನುಬಂಧ -1

ತೆಂಗು ನುಸಿ ನಿಯಂತ್ರಣ ಯೋಜನೆಯಡಿ ತಾಲ್ಲೂಕುವಾರು ಉಪಯೋಗಿಸಿದ ಔಷಧಿ ಪ್ರಮಾಣ

ಬೆಂಗಳೂರು ಗ್ರಾಮಾಂತರ	
ಚನ್ನಪಟ್ಟಣ	7.61
ರಾಮನಗರ	3163
ಕನಕಪುರ	3612
ಮಾಗಡಿ	1500
ದೇವನಹಳ್ಳಿ	1440
ಹೊಸಕೋಟೆ	1769
ನೆಲಮಂಗಲ	1671
ಒಟ್ಟು	21767
ಬೆಂಗಳೂರು ನಗರ	
ಅನೇಕಲ್	430
ಬೆಂಗಳೂರು ದಕ್ಷಿಣ	2504
ಬೆಂಗಳೂರು ಉತ್ತರ	1546
ಒಟ್ಟು	4480
ಮಂಡ್ಯ	
ಮದ್ದೂರು	4355
ಮಂಡ್ಯ	1719
ಮಳವಳ್ಳಿ	1364
ಕೆ.ಆರ್.ಪೇಟೆ	1815
ಪಾಂಡವಪುರ	806
ಶ್ರೀರಂಗಪಟ್ಟಣ	733
ನಾಗಮಂಗಲ	3006
ಒಟ್ಟು	13798

ತುಮಕೂರು	
ಚಿಕ್ಕನಾಯಕನಹಳ್ಳಿ	3186
ಗುಬ್ಬಿ	3685
ಕೊರಟಗೆರೆ	1482
ಕುಣಿಗಲ್	1513
ಮಧುಗಿರಿ	369
ಪಾವಗಡ	230
ಶಿರಾ	1604
ತಿಪಟೂರು	4231
ತುಮಕೂರು	4422
ತುರುವೇಕೆರೆ	4831
ಒಟ್ಟು	25553
ಕೋಲಾರ	
ಬಾಗೇಪಲ್ಲಿ	293
ಬಂಗಾರಪೇಟೆ	1044
ಚಿಕ್ಕಬಳ್ಳಾಪುರ	248
ಚಿಂತಾಮಣಿ	484
ಗೌರಿಬಿದನೂರು	603
ಗುಡಿಬಂಡೆ	110
ಕೋಲಾರ	567
ಮಾಲೂರು	439
ಮುಳಬಾಗಿಲು	631
ಶಿಡ್ಲಘಟ್ಟ	260
ಶ್ರೀನಿವಾಸಪುರ	616
ಒಟ್ಟು	5292
ಮೈಸೂರು	
ಕೆ.ಆರ್.ನಗರ	2156
ಹುಣಸೂರು	1301
ಪಿರಿಯಾಪಟ್ಟಣ	2088
ಮೈಸೂರು	542
ಒಟ್ಟು	6087

ಚಾಮರಾಜನಗರ	
ಚಾಮರಾಜನಗರ	1888
ಗುಂಡ್ಲುಪೇಟೆ	841
ಕೊಳ್ಳೇಗಾಲ	768
ಯಳಂದೂರು	313
ಒಟ್ಟು	3810
ಚಿತ್ರದುರ್ಗ	
ಚಿತ್ರದುರ್ಗ	1158
ಚಳ್ಳಕೆರೆ	1166
ಹೊಸದುರ್ಗ	8927
ಹಿರಿಯೂರು	2340
ಮೊಳಕಾಲ್ಮೂರು	215
ಹೊಳಲ್ಕೆರೆ	20
ಒಟ್ಟು	13826
ದಾವಣಗೆರೆ	
ದಾವಣಗೆರೆ	851
ಹರಿಹರ	1000
ಜಗಳೂರು	492
ಹರಪನಹಳ್ಳಿ	338
ಚನ್ನಗಿರಿ	1438
ಹೊನ್ನಾಳಿ	375
ಒಟ್ಟು	4492
ಹಾಸನ	
ಅರಸೀಕರೆ	3790
ಚನ್ನರಾಯಪಟ್ಟಣ	3327
ಹಾಸನ	904
ಹೊಳೆನರಸೀಪುರ	807
ಅರಕಲಗೂಡು	608
ಬೇಲೂರು	1022
ಸಕಲೇಶಪುರ	78
ಆಲೂರು	63
ಒಟ್ಟು	10600

ಶಿವಮೊಗ್ಗ	
ಶಿವಮೊಗ್ಗ	1435
ಹೊಸನಗರ	84
ಶಿಕಾರಿಪುರ	190
ಸಾಗರ	89
ಸೊರಬ	47
ಭದ್ರಾವತಿ	1243
ತೀರ್ಥಹಳ್ಳಿ	61
ಒಟ್ಟು	3175
ಚಿಕ್ಕಮಗಳೂರು	
ಚಿಕ್ಕಮಗಳೂರು	1050
ಕಡೂರು	6563
ತರೀಕೆರೆ	2793
ಒಟ್ಟು	10135

ರಾಜ್ಯದಲ್ಲಿ ತೆಂಗು ನುಸಿ ಪೀಡೆಗೆ ಸರಬರಾಜು ಮಾಡಿದ ಔಷಧಿ

208 (1781)- ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ತೆಂಗಿನ ನುಸಿಪೀಡೆ ಕಳೆಯಲು ಯಾವಾಗ ನಿರ್ಧಾರ ತೆಗೆದುಕೊಳ್ಳ ಲಾಯಿತು?

ಆ. ಹಾಗಿದ್ದಲ್ಲಿ, ಎಷ್ಟು ಕೋಟಿ ರೂ.ಗಳ ಔಷಧ ಕೊಳ್ಳಲಾಯಿತು?

ಇ. ಈ ಔಷಧವನ್ನು ಯಾವ ಯಾವ ಏಜೆನ್ಸಿ ಮೂಲಕ ಕೊಳ್ಳಲಾಯಿತು?

ಈ. ಇದುವರೆವಿಗೆ ಔಷಧವನ್ನು ಯಾವ ರೀತಿ ರೈತನಿಗೆ ನೀಡಲಾಗಿದೆ?

ಉ. ಕೊಟ್ಟ ಔಷಧ ಸಮರ್ಪಕವಾಗಿ ಕೆಲಸ ಮಾಡಿದೆಯೇ?

ಊ. ಔಷಧ ಹಾಕಿದ ನಂತರ ಎಷ್ಟು ಮರಗಳು ಹಾಳಾಗಿ ಕಡಿಯಲಾಗಿದೆ?

ಋ. ಸರ್ಕಾರ ಕಳಪೆ ಔಷಧ ಖರೀದಿ ಮಾಡಲು ಕಾರಣವೇನು?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಚಿವರು)

ಅ. 1999-2000ನೇ ಸಾಲಿನ ಫೆಬ್ರುವರಿ 2000ನೇ ಮಾಹೆಯಲ್ಲಿ

ಆ. ನುಸಿಪೀಡೆ ನಿಯಂತ್ರಣಕ್ಕೆ 1999-2000ನೇ ಸಾಲಿನಲ್ಲಿ ರೂ.2.40 ಕೋಟಿ ಹಾಗೂ 2001-02ನೇ ಸಾಲಿನಲ್ಲಿ ರೂ. 9.60 ಕೋಟಿಗಳಿಗೆ ಔಷಧಿಗಳನ್ನು ಖರೀದಿಸಲಾಗಿದೆ.

ಇ. ಈ ಔಷಧವನ್ನು 3 ಏಜೆನ್ಸಿಗಳಾದ ಕರ್ನಾಟಕ ತೋಟಗಾರಿಕಾ ಮಹಾಮಂಡಳ, ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರುಕಟ್ಟೆ ಮಹಾ ಮಂಡಳಿಗಳ ಮುಖಾಂತರ ಖರೀದಿಸಲಾಗಿದೆ.